# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 154, ಬಸವನಗುಡಿ ಬೆಂಗಳೂರು.

ಸಂಖ್ಯೆ: ಸ.ಅ/ವಾ-154/2022-23

ದಿನಾಂಕ: 19-12-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21. ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 17-12-2022 ಶನಿವಾರ ವಾರ್ಡ್ ಸಂಖ್ಯೆ: 210, ಬಸವನಗುಡಿ ವಾರ್ಡ್ ಕಛೇರಿಯಲ್ಲಿ ನಡೆದ ಡಿಸೆಂಬರ್ ತಿಂಗಳ 2ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಬಸವನಗುಡಿ, ಎನ್.ಆರ್. ಕಾಲೋನಿ ಹತ್ತಿರ
ಸಮಯ: ಬೆಳಿಗ್ಗೆ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಮಂಜುನಾಥ ರೆಡ್ಡಿ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 2 | ಶ್ರೀ ಟಿ. ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-210, ಬಸವನಗುಡಿ |
| 3 | ಶ್ರೀ. ಹೇಮಂತ್ ಕುಮಾರ್. ಕೆ.ಹೆಚ್ | ಹಿ.ಆ.ಪರಿವೀಕ್ಷಕರು ವಾರ್ಡ್-210 |
| 4 | ಶ್ರೀಮತಿ. ಶ್ರೀಲತಾ | ಗುತ್ತಿಗೆದಾರರು, ಬೀದಿದೀಪ ನಿರ್ವಹಣೆ |
| 5 | ಶ್ರೀ. ಮುನಿರಾಜು. ಕೆ | ಬೆಸ್ಕಾಂ ಸ.ಅ |
| 6 | ಶ್ರೀ. ಕುಬೇಂದ್ರ. ಬಿ.ಆರ್ | ಕಂ.ಪರಿವೀಕ್ಷಕರು ವಾರ್ಡ್-210 |
| 7 | ಶ್ರೀ. ಎಸ್. ಶ್ರೀಧರನ್ | ಸಾರ್ವಜನಿಕರು |
| 8 | ಶ್ರೀ. ಬಿ.ಆರ್. ನಾಗಪ್ರಸಾದ್ | ಸಾರ್ವಜನಿಕರು |
| 9 | ಶ್ರೀ. ಗುರುಪ್ರಸಾದ್. ಆರ್.ಕೆ | ಸಾರ್ವಜನಿಕರು |
| 10 | ಶ್ರೀ. ಆನಂದ ತೀರ್ಥ | ಸಾರ್ವಜನಿಕರು |
| 11 | ಶ್ರೀ. ಸತ್ಯೇಂದ್ರ ವಿಠ್ಠಲ್ | ಸಾರ್ವಜನಿಕರು |
| 12 | ಶ್ರೀ. ದೊರೆ. ಎಂ | ಸಾರ್ವಜನಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ. ಮಂಜುನಾಥ ರೆಡ್ಡಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಗೆ ಪೋಲೀಸ್ ಇಲಾಖೆ, ಬಿಡಬ್ಲ್ಯೂ.ಎಸ್.ಎಸ್.ಬಿ, ಬೆಸ್ಕಾಂ ಇಲಾಖೆಯಿಂದ ಗೈರು ಹಾಜರಾಗಿರುತ್ತಾರೆ.

ಬೈಟು ಕಾಫಿ ಮುಂಭಾಗ ಟ್ರಾಫಿಕ್ ತೊಂದರೆ ನಿವಾರಿಸಲು ಶ್ರೀಧರ್ ರವರು ರಸ್ತೆಯ ಮೂಲೆಗಳಲ್ಲಿ ಪಾರ್ಕಿಂಗ್ ತೆರವುಗೊಳಿಸಲು ಕೋರಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ಹಾಜರಿದ್ದ ಅಭಿಯಂತರರು ತಿಳಿಸಿರುತ್ತಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಲು ಆರೋಗ್ಯ ಇಲಾಖೆಯವರು ಸಭೆಯಲ್ಲಿ ತಿಳಿಸಿರುತ್ತಾರೆ.



Scanned with CamScanner

ಅಬಲಾಶ್ರಮ ಕಟ್ಟಡದಲ್ಲಿ ವಾಹನಗಳ ನಿಲುಗಡೆ ಮಾಡುತ್ತಿದ್ದು ಈ ಬಗ್ಗೆ ಕ್ರಮಕೈಗೊಳ್ಳಲು ಸಾರ್ವಜನಿಕರು ತಿಳಿಸಿರುತ್ತಾರೆ ಹಾಗೂ ಅಬಲಾಶ್ರಮದ ಹಿಂದಿನ ರಸ್ತೆಯಲ್ಲಿ ಹಾಕಿರುವ ತ್ಯಾಜ್ಯವನ್ನು ತೆಗೆಯಲು ಸಹ ತಿಳಿಸಿರುತ್ತಾರೆ.

ಈ ಸಂಬಂಧ ಅಬಲಾಶ್ರಮ ಕಟ್ಟಡದ ಮಾಲೀಕರಿಗೆ ಈ ಬಗ್ಗೆ ವಿಷಯ ತಿಳಿಸಿದ್ದು, ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ ಹಾಗೂ ಕಟ್ಟಡದ ಹಿಂಭಾಗದ ತ್ಯಾಜ್ಯವನ್ನು ತೆಗೆಯಲು ಕ್ರಮಕೈಗೊಳ್ಳಲಾಗಿದೆ.

ಪುಟ್ಟಣ್ಣ ರಸ್ತೆಯಲ್ಲಿನ ಏಕಮುಖ ರಸ್ತೆ ಫಲಕವನ್ನು ತೆಗೆಯಲು ಕೋರಿರುವ ವಿಷಯವನ್ನು ಪೋಲೀಸ್ ಇಲಾಖೆಗೆ ತಿಳಿಸಲಾಗಿದೆ.

ದಿನಾಂಕ: 23-12-2022 ರಂದು ಡಿ.ವಿ.ಜಿ ರಸ್ತೆ, ಈ.ಎ.ಟಿ ರಸ್ತೆಗಳಲ್ಲಿನ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲು ಕಾರ್ಯಾಚರಣೆ ನಡೆಸಲು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ. ಅದರಂತೆ ಸಂಚಾರಿ ಪೋಲೀಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರ್ ರವರೊಂದಿಗೆ ಚರ್ಚಿಸಲಾಗಿದ್ದು ಸದರಿಯವರು ಕಾರ್ಯಾಚರಣೆಯನ್ನು ಸಂಕ್ರಾಂತಿ ಹಬ್ಬದ ನಂತರ ನಡೆಸಲು ಸೂಕ್ತವಾಗಿದ್ದು ಈ ಸಮಯದಲ್ಲಿ ಬೀದಿ ಬದಿ ವ್ಯಾಪಾರಿಗಳು ಗಾಡಿಗಳನ್ನು ರಸ್ತೆ ಬದಿಯಲ್ಲೇ ನಿಲ್ಲಿಸುವುದರಿಂದ ಗಾಡಿಗಳನ್ನು ತೆರವುಗೊಳಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಕಂದಾಯ ಇಲಾಖೆಯಿಂದ ಹಾಜರಿದ್ದ ಕಂದಾಯ ಅಧಿಕಾರಿಗಳು ಮತದಾರರ ಚೀಟಿ ಬಗ್ಗೆ ಜಾಗೃತಿ ಮೂಡಿಸಲು ಆಟೋಗಳಿಂದ ಪ್ರಚಾರ ಮಾಡುತ್ತಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವ ಬಗ್ಗೆ ಹಾಗೂ ಹೆಸರುಗಳನ್ನು ತೆಗೆದಿರುವ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿರುತ್ತಾರೆ.

ಎಸ್.ಎಸ್.ಎಂ ಶಾಲೆ ಹಾಗೂ ಬ್ಯೂಗಲ್‌ರಾಕ್ ಉದ್ಯಾನವನದಲ್ಲಿ ವಿದ್ಯುತ್ ದೀಪಗಳು ಹೆಚ್ಚು ಸಮಯ ಉರಿಯುತ್ತಿದ್ದು ಈ ಬಗ್ಗೆ ಕ್ರಮಕೈಗೊಳ್ಳುವಂತೆ ತಿಳಿಸಿರುತ್ತಾರೆ. ಸದರಿ ವಿಷಯವನ್ನು ಬೀದಿ ದೀಪ ನಿರ್ವಹಣಾ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಪಾದಚಾರಿ ರಸ್ತೆಗಳ ಮೇಲೆ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಚರಂಡಿಯ ಕಲ್ಲುಗಳು ಹೊಡೆದು ಹೋಗುತ್ತಿರುವುದರಿಂದ ವಾಹನಗಳನ್ನು ಚರಂಡಿಗಳ ಮೇಲೆ ನಿಲ್ಲಿಸದಿರುವ ಬಗ್ಗೆ ಸಂಚಾರಿ ಪೋಲೀಸರಿಗೆ ತಿಳಿಸಲು ಹಾಗೂ ಕ್ರಮಕೈಗೊಳ್ಳಲು ಸಾರ್ವಜನಿಕರು ಸಭೆಯಲ್ಲಿ ಕೋರಿರುತ್ತಾರೆ. ವಿಷಯವನ್ನು ಸಂಚಾರಿ ಪೋಲೀಸರಿಗೆ ತಿಳಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.

ವಾರ್ಡ್ ವ್ಯಾಪ್ತಿಯಲ್ಲಿ ಹೊಸ ವಾಣಿಜ್ಯ ಮಳಿಗೆಗಳಿಗೆ ನೋಟೀಸ್ ನೀಡಲು ಸಭೆಯಲ್ಲಿ ಸಾರ್ವಜನಿಕರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಧ್ಯಕ್ಷರು ರವರು ಈ ವಿಷಯಗಳ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಅಧ್ಯಕ್ಷರು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 210, ಬಸವನಗುಡಿ

19/1

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 210, ಬಸವನಗುಡಿ



Scanned with CamScanner